C.R.P.67

| Form No.4 (Criminal) Deposition Sheets (R.P.No.57) |
|---|

# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 16/2025

**ಚಾ.ಸಾ.–23 ಪ್ರಾ.ಸಾ.–7**

| | |
|---|---|
| **ಸಾಕ್ಷಿದಾರರ ಹೆಸರು** | **ಕೃಷ್ಣಪ್ಪ** |
| **ತಂದೆಯ ಹೆಸರು** | **ವೆಂಕಟೇಶಪ್ಪ** |
| **ವಯಸ್ಸು** | **54 ವರ್ಷಗಳು** |
| **ಉದ್ಯೋಗ** | **ಪೋಲೀಸ್ ಉಪ ಅಧೀಕ್ಷಕರು , ಕೋಲಾರ ಉಪವಿಭಾಗ** |
| **ವಾಸ** | **ಕೋಲಾರ** |

**ದಿನಾಂಕಃ 11–08–2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು 18–09–2023 ರಿಂದ 12–10–2025 ರವರಗೆ ನಾನು ಪೋಲೀಸ್ ಉಪಾಧೀಕ್ಷಕನಾಗಿ ಮಳವಳ್ಳಿ ಉಪ ವಿಭಾಗದಲ್ಲಿ ಮದ್ದೂರು ಪೋಲೀಸ್ ಠಾಣೆಯಲ್ಲಿ ಮಳವಳ್ಳಿ ಉಪವಿಭಾಗಕ್ಕೆ ಬರುತ್ತಿತ್ತು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 16–12–2024 ರಂದು ಈ ಪ್ರಕರಣದ ಕಡತವನ್ನು ಮಂಡ್ಯ ಜಿಲ್ಲೆಯ ಅಧೀಕ್ಷಕರ ಆದೇಶದ ಮೇರೆಹಗೆ ಚಾಸಾ–21 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿದ್ದೇನೆ. ಸದರಿ ಆದೇಶ ಈಗ ನೋಡುತ್ತಿದ್ದೇನೆ. ಅದನ್ನು ನಿಪಿ 15 ಎಂದು ಸಾಕ್ಷಿಯ ಸಹಿಯನ್ನು ನಿಪಿ 15–ಎ ಎಂದು ಗುರುತಿಸಲಾಯಿತು. ಅದೇ ದಿನ ಗಾಯದ ಪ್ರಮಾಣ ಪತ್ರ ಕೊಡಲು ಕೋರಿಕೆ ಕೊಟ್ಟಿದ್ದೇನೆ . ದಿನಾಂಕ 17–12–2024 ರಂದು ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಸದರಿ ಸ್ಥಳ ಮದ್ದೂರು ತಾಲೂಕಿನ ಚಾಮನಹಳ್ಳಿ ಗ್ರಾಮದಲ್ಲಿ ರಾಜು ಎಂಬುವವರು ಮಹದೇಶ್ವರ ಪ್ರಾವಿಷನ್ ಸ್ಟೋರ್ ಮುಂಭಾಗ ಆಗಿರುತ್ತದೆ. ಸದರಿ ಜಾಗವನ್ನು ಚಾಸಾ 1 ರವರು ತೋರಿಸಿಕೊಟ್ಟಿದ್ದಾರೆ ಆ

ಸಮಯದಲ್ಲಿ ಚಾಸ 11 ಮತ್ತು 12 ರವರು ಹಾಜರಿದ್ದು ಸ್ಥಳ ತೋರಿಸಿಕೊಟ್ಟಿದ್ದಾರೆ ಅಲ್ಲಿ ಮಹಜರ್ ಬರೆದಿದ್ದೇನೆ ಅದನ್ನು ಬೆಳಗ್ಗೆ 9–50 ರಿಂದ 10–30 ರವರೆಗೆ ಬರೆದಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ 2 ಆಗಿದೆ . ಸಾಕ್ಷಿಯ ಸಹಿಯನ್ನು ನಿಪಿ 2–ಬಿ ಎಂದು ಗುರುತಿಸಲಾಯಿತು . ಸ್ಥಳದಲ್ಲಿ ನಿಪಿ 3 ರಂತೆ ಭಾವ ಚಿತ್ರಗಳನ್ನು ತೆಗೆದಿದ್ದೇನೆ ಮತ್ತು ವೀಡಿಯೋ ರೇಕಾರ್ಡಿಂಗ್ ಮಾಡಿದ್ದೇನೆ. ಅದೇ ದಿನ ಚಾಸಾ 1 ರವರ ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರ ಕೊಡಲು ತಹಶೀಲ್ದಾರ್ ರವರಿಗೆ ಕೋರಿಕೆ ಕೊಟ್ಟಿದ್ದೇನೆ. ಅಂಗಡಿಗೆ ಸಂಬಂಧಿಸಿದ ಲೈಸನ್ಸ ಕೊಡುವಂತೆ ಕೋರಿಕೆ ಪತ್ರ ಕೊಟ್ಟಿರುತ್ತೇನೆ. ಸ್ಥಳದ ನಕ್ಷೆ ಕೊಡಲು ಪಿ ಡಬ್ಲ್ಯೂ ರವರಿಗೆ ಕೋರಿಕೆ ಕೊಟ್ಟಿರುತ್ತೇನೆ. ಚಾಸಾ 1 ರವರ ಮುಂದುವರೆದ ಹೇಳಿಕೆ ಮತ್ತು ಚಾಸಾ 3 , 4 , 5 , 9 ರವರೆಗಿನ ಹೇಳಿಕೆಯನ್ನು ಬರೆದುಕೊಂಡಿರುತ್ತೇನೆ. ಚಾಸಾ 1 ರವರು ನನ್ನ ಮುಂದೆ ನಿಪಿ 4 ರಂತೆ ಮುಂದುವರೆದ ಹೇಳಿಕೆಕೊಟ್ಟಿರುತ್ತಾರೆ . ಚಾಸಾ 2 , 3 , 4 ರವರು ನಿಪಿ 5 ರಿಂದ 7 ರಂತೆ ಹೇಳಿಕೆ ಕೊಟ್ಟಿರುತ್ತಾರೆ . ಚಾಸಾ 18 ಮತ್ತು 19 ರವರ ಹೇಳಿಕೆ ಬರೆದುಕೊಂಡಿರುತ್ತೇನೆ. ಸ್ಥಳದ ಸಿಸಿ ಟಿ ವಿ ಪೂಟೇಜ್ ನ್ನು ಹಾಜರು ಪಡಿಸಲು ಮದ್ದೂರು ಪೊಲೀಸ ಠಾಣೆಯವರಿಗೆ ಜ್ಞಾಪಕ ಪತ್ರ ಹೊರಡಿಸಿದ್ದೇನೆ. ಘಟನಾ ಜಾಗದಲ್ಲಿ ಘಟನಾ ಕಾಲಕ್ಕೆ ವಿದ್ಯುತ ಸರಬರಾಜು ಇದೆಯೇ ಎಂಬುದರ ಬಗ್ಗೆ ಚಸ್ಕಾಂ ಮದ್ದೂರುರವರಿಗೆ ಕೋರಿಕೆ ಪತ್ರ ಕೊಟ್ಟಿರುತ್ತೇನೆ. ಚಾಸಾ 20 ಹೇಳಿಕೆಯನ್ನು ಬರೆದುಕೊಂಡಿರುತ್ತೇನೆ . ಚಾಸಾ 6 ಮತ್ತು 10 ರವರ ಹೇಳಿಕೆಯನ್ನು ಬರೆದುಕೊಂಡಿರುತ್ತೇನೆ . ಆರೋಪಿತರನ್ನು ಪತ್ತೆ ಮಾಡಿ ಹಾಜರು ಮಾಡುವ ಬಗ್ಗೆ ಪೊಲೀಸರಿಗೆ ಆದೇಶ ನೀಡಿದ್ದೇನೆ. ಗಾಯಾಳುವಿನ ಗಾಯದ ಪ್ರಮಾಣ ಪತ್ರ ಮತ್ತು ಎಂ ಎಲ್ ಸಿ ಪಡೆದುಕೊಂಡಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ 12 ಮತ್ತು 13 ಆಗಿರುತ್ತದೆ. ಸಾಕ್ಷಿಯನ್ನು ನಿಪಿ 12–ಬಿ ಮತ್ತು 13 ಬಿ ಎಂದು ಗುರುತಿಸಲಾಯಿತು. ಮಹದೇಶ್ವರ ಫ್ರಾವಿಷನ್ ಸ್ಟೋರ್ ಗೆ ಸಂಬಂಧಿಸಿದಂತೆ ದಾಖಲೆಗಳನು ಪಿ ಡಿ ಒ ರವರಿಂದ ಪಡೆದುಕೊಂಡಿರುತ್ತೇನೆ. ಅದು ಈಗಾಗಲೇ ನಿಪಿ 9 ಆಗಿದೆ . ಸಾಕ್ಷಿಯ ಸಹಿಯನ್ನು ನಿಪಿ 9–ಎ ಎಂದು ಗುರುತಿಸಲಾಯಿತು. ಚಸ್ಕಾ ವಿದ್ಯುತ್ ಕಂಪನಿಯಿಂದ ವಿದ್ಯುತ್ ಸರಬರಾಜು ಇದ್ದ ಬಗ್ಗೆ ದಾಖಲೆ ಪಡೆದುಕೊಂಡಿರುತ್ತೇನೆ. ಅದು ಈಗಾಗಲೇ ನಿಪಿ 10 ಆಗಿದೆ . ಸಾಕ್ಷಿಯ ಸಹಿಯನ್ನು ನಿಪಿ 10–ಎ ಎಂದು ಗುರುತಿಸಲಾಯಿತು. ಚಾಸಾ 1 ಮತ್ತು ಆರೋಪಿತರ ಜಾತಿ ದೃಡೀಕರಣ ಪತ್ರ ಪಡೆದುಕೊಂಡಿರುತ್ತೇನೆ.

ಅದು ಈಗಾಗಲೇ ನಿಪಿ 8  ಆಗಿದೆ . ಸಾಕ್ಷಿಯ ಸಹಿಯನ್ನು ನಿಪಿ 8–ಎ ಎಂದು ಗುರುತಿಸಲಾಯಿತು.  ಡಿವಿಡಿ ಗಳನ್ನು ಹೇಳಿಕೆಗಳನ್ನು , ಭಾವ ಚಿತ್ರಗಳನ್ನು ಮತ್ತು ಅವರ ಹೇಳಿಕೆಗಳನ್ನು ಪಡೆದುಕೊಂಡಿರುವ ಬಗ್ಗೆ  ಕಲಂ 63(ಸಿ) ಬಿ ಎಸ್ ಎ ರಡಿಯಲ್ಲಿ ಪ್ರಮಾಣ ಪತ್ರವನ್ನು ನಮ್ಮ ಚಾಸಾ 20 ರವರಿಂದ  ಪಡೆದುಕೊಂಡಿರುತ್ತೇನೆ. ಅದನ್ನು ಈಗ ನಿಪಿ 16 ಎಂದು , ಸಾಕ್ಷಿಯ ಸಹಿಯನ್ನು  ನಿಪಿ 16–ಎ ಎಂದು ಗುರುತಿಸಲಾಯಿತು. ಅದರ ಜೊತೆ  ಡಿವಿಡಿ ಗಳನ್ನು  ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅದನ್ನು ನಿಪಿ 17 ಎಂದು ಗುರುತಿಸಲಾಯಿತು. ಪಿ ಎಸ್ ಐ ಮದ್ದೂರು ಸ್ಥಳದ ಸಿಸಿ ಟಿ ವಿ ಪೊಟೇಜ್ ನ್ನು ವರದಿ ಜೊತೆ ಕೊಟ್ಟಿದ್ದಾರೆ  .  ಕೃತ್ಯ ನಡೆದ ನಕಾಶೆಯನ್ನು ಪಿ ಡಬ್ಲ್ಯೂ ಡಿ ರವರಿಂದ ಪಡೆದುಕೊಂಡಿರುತ್ತೇನೆ . ಅದು ಈಗಾಗಲೇ ನಿಪಿ 11 ಆಗಿದೆ . ಸಾಕ್ಷಿಯ ಸಹಿಯನ್ನು  ನಿಪಿ 11–ಎ ಎಂದು ಗುರುತಿಸಲಾಯಿತು.  ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿದ್ದಾರೆ . ನ್ಯಾಯಾಲಯದ ಆದೇಶದಂತೆ ಬಾಂಡ್ ಪಡೆದುಕೊಂಡು ಅವರನ್ನು ಬಿಡುಗಡೆ ಮಾಡಿರುತ್ತೇನೆ. ನನ್ನ ಮುಂದೆ ಹಾಜರಾದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿರುತ್ತಾರೆ . ದಿನಾಂಕ 11–01–2025 ರಂದು ಪ್ರಾವಿಷನ್ ಸ್ಟೋರ್ ವಿದ್ಯುತ ಸಂಪರ್ಕ ಪಡೆದುಕೊಂಡು ಬಗ್ಗೆ ಚಸ್ಕಾಂಗೆ ಪತ್ರ ಬರೆದಿದ್ದೇನೆ.  ಅದನು ಈಗ ನಿಪಿ 18 ಎಂದು, ಸಾಕ್ಷಿಯ ಸಹಿಯನ್ನು  ನಿಪಿ 18–ಎ ಎಂದು ಗುರುತಿಸಲಾಯಿತು. ಚಸ್ಕಾಂ ರವರು ದಿನಾಂಕ 09–7–2025 ರಂದು ವರದಿ ಕೊಟ್ಟಿರುತ್ತಾರೆ . ಅದನ್ನು ಈಗ ನೋಡುತ್ತಿದ್ದೇನೆ. ವರದಿ ಮತ್ತು ದಾಖಲೆಯನ್ನು ನಿಪಿ 19 ಎಂದು, ಸಾಕ್ಷಿಯ ಸಹಿಯನ್ನು  ನಿಪಿ 19–ಎ ಎಂದು ಗುರುತಿಸಲಾಯಿತು. ತನಿಖೆ ಮುಗಿದು ಆರೋಪಿತರ ವಿರುದ್ಧ ಆರೋಪದ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ,

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎಂ.ಸಿ  ವಕೀಲರಿಂದ:</u>**

ಈ ಪ್ರಕರಣದಲ್ಲಿ ಆರೋಪಿತರು ಚಾಸಾ 1 ರವರ ಮೇಲೆ ಒಂದು ದೂರು ಕೊಟ್ಟಿದ್ದಾರೆ ಎಂದರೆ ಸರಿ . ಅದರ ಅಪರಾಧ ಸಂಖ್ಯೆ 270/2024 ಆಗಿರುತ್ತದೆ. ಸದರಿ ಪ್ರಕರಣದ ಪ್ರಕಾರ ಈ ಪ್ರಕರಣದ ಸಾಕ್ಷಿದಾರರೇ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಹಲ್ಲೆ ಮಾಡಿದ್ದಾರೆ ಎಂದು ಆಪಾದಿಸಲಾಗಿರುತ್ತದೆ ಎಂದರೆ ಸರಿ . ಸದರಿ

ಪ್ರಕರಣದಲ್ಲೂ ಕೂಡಾ ಈ ಪ್ರಕರಣದ ಸಾಕ್ಷಿದಾರರು ವಿರುದ್ಧ ನಾನೇ ಆರೋಪ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿ . ಈ ಪ್ರಕರಣದ ಸಾಕ್ಷಿದಾರರೇ ಆರೋಪಿತರನ್ನು ಹಲ್ಲೆ ಮಾಡಿ ಆರೋಪಿತರು ಪ್ರಕರಣ ದಾಖಲು ಮಾಡುವ ಮೊದಲು ಅವರ ವಿರುದ್ಧ ಒಂದು ಸುಳ್ಳು ದೂರನ್ನು ಕೊಡಲಾಗಿದೆ ಎಂದರೆ ಸಾಕ್ಷಿದಾರರು ಇಬ್ಬರೂ ಕೊಟ್ಟ ದೂರು ಗಳನ್ನು ಪಡೆದುಕೊಂಡು ಆರೋಪ ಪಟ್ಟಿ ಸಲ್ಲಿಸಿರುತ್ತೇನೆ. ಈ ಪ್ರಕರಣದ ಸಾಕ್ಷಿದಾರರೇ ಆರೋಪಿತರಿಗೆ ಹಲ್ಲೆ ಮಾಡಿದ ವಿಚಾರ ತನಿಖೆ ಯಲ್ಲಿ ಕಂಡು ಬಂದಿದ್ದರೂ , ಆರೋಪಿತರು ಯಾವುದೇ ಕೃತ್ಯವನ್ನು ಎಸಗಿಲ್ಲವೆಂದು ತನಿಖೆಯಲ್ಲಿ ಕಂಡು ಬಂದಿದ್ದರೂ ಕೂಡಾ ಈ ಪ್ರಕರಣದ ಸಾಕ್ಷಿದಾರರಿಗೆ ಸಹಾಯ ಮಾಡಲು ಸುಳ್ಳು ಆರೋಪ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಬೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಕುಳಿತು ದಾಖಲೆ ಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರಾಧಿಕಾರಗಳಿಂದ ನೀಡಲಾಗಿವೆ ಎಂದು ಹೇಳಲಾಗುವ ಎಲ್ಲಾ ದಾಖಲೆಗಳನ್ನು ನಾನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**